**<u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.</u>**

**ಸಿ.ಸಿ. ಸಂಖ್ಯೆಃ 774/2021**

**ಸಾಕ್ಷಿಯನ್ನು ದಿಃ 24.06.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**<u>ಮುಂದುವರಿದ ಪಾಟೀ ಸವಾಲುಃ ಪಿರ್ಯಾದುದಾರರ ಪರ ಶ್ರೀಮತಿ RSP ವಕೀಲರಿಂದಃ</u>**

ಹುಣಸೂರು 1ನೇ ಹೆಚ್ಚುವರಿ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಕುಶಕುಮಾರ್ ಎನ್ನುವವರು ನನ್ನ ವಿರುದ್ದ ಚೆಕ್ಕಿನ ಪ್ರಕರಣವನ್ನು ದಾಖಲಿಸಿದ್ದಾರೆ ಎಂದರೆ ಸರಿ. ಸದರಿ ಪ್ರಕರಣದ ಸಂಖ್ಯೆಸಿಸಿ ನಂ. 439/2021 ಎಂದರೆ ಸರಿ. ಸಾಕ್ಷಿಗೆ ಸಿಸಿ ನಂ. 439/2021ರ ದೂರಿನ ದೃಢೀಕೃತ ನಕಲನ್ನು ತೋರಿಸಿ ಸದರಿ ಪ್ರಕರಣದಲ್ಲಿ ಕುಶಕುಮಾರ್ ರವರ ತಂದೆಯ ಹೆಸರು ಲೇಟ್ ಪುಟ್ಟೇಗೌಡ ಎಂದು ಬರೆಯಲಾಗಿದೆ ಎಂದರೆ ಅದರಲ್ಲಿ ಬರೆಯಲಾಗಿದೆ, ಅವರ ತಂದೆಯ ಹೆಸರು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ನಿಪಿ-7 ಎಂದು ಗುರುತಿಸಲಾಯಿತು. ಸದರಿ ಪ್ರಕರಣದಲ್ಲಿ ಚೆಕ್ಕಿನ ಮೊತ್ತ ರೂ.450000/- ಇದೆ ಎಂದರೆ ಸರಿ. ಅದನ್ನು ಅವರು ಬರೆದುಕೊಂಡಿದ್ದಾರೆ. ಸದರಿ ಪ್ರಕರಣದಲ್ಲಿ ನಾನು ಜಾಮೀನು ಪಡೆಯುವಾಗ ಜಾಮೀನು ಬಂದ ಪತ್ರದಲ್ಲಿ ನನ್ನ ಮೈಸೂರಿನ ವಿಳಾಸವನ್ನೇ ಕಾಣಿಸಿದ್ದೇನೆ. ಸದರಿ ಪ್ರಕರಣದಲ್ಲಿ ನನ್ನ ವಿಳಾಸ ಮೈಸೂರಿನ ಬೋಗಾದಿ extension ಎಂದು ಬರೆಯಲಾಗಿದೆ. ನಿಪಿ-7ರ ದಾಖಲೆಯಲ್ಲಿ ನನ್ನ ವಿಳಾಸ ಹಿಂಡಗೂಡ್ಲು ಗ್ರಾಮ, ಹನಗೋಡು ಹೋಬಳಿ ಹುಣಸೂರು ತಾಲ್ಲೂಕು ಎಂದು ಬರೆಯಲಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ನಾನು ವಾಸ ಮೈಸೂರಿನಲ್ಲಿದ್ದೇನೆ ಎಂದು ನುಡಿಯುತ್ತಾರೆ. ಸದರಿ ಪ್ರಕರಣದಲ್ಲಿ ನಾನು ಸಾಕ್ಷಿ ವಿಚಾರಣೆಯ ಪ್ರಮಾಣ ಪತ್ರದಲ್ಲಿ ನನ್ನ ಮೈಸೂರಿನ ವಿಳಾಸವನ್ನೇ ನೀಡಿದ್ದೇನೆ. ಸಾಕ್ಷಿಗೆ ಸಿಸಿ ನಂ. 439/2021ರಲ್ಲಿ ಸಾಕ್ಷಿಯ ವಿಚಾರಣೆಯ ದೃಢೀಕೃತ ನಕಲನ್ನು ತೋರಿಸಿ ಅದರಲ್ಲಿ ಸಾಕ್ಷಿಯ ವಿಳಾಸ ಹಿಂಡಗೂಡ್ಲು ಗ್ರಾಮ, ಹನಗೋಡು ಹೋಬಳಿ ಹುಣಸೂರು ತಾಲ್ಲೂಕು ಹಾಲಿ ವಾಸ ಮೈಸೂರು ಎಂದು ಬರೆಯಲಾಗಿದೆ ಎಂದರೆ ಸರಿ. ಸದರಿ ದಾಖಲೆಯನ್ನು ನಿಪಿ-8 ಎಂದು ಗುರುತಿಸಲಾಯಿತು.

ಈ ಪ್ರಕರಣದ ಫಿರ್ಯಾದಿನಲ್ಲಿ ಫಿರ್ಯಾದುದಾರರ ಹೆಸರು ರೇಖಾ.ಪಿ ಬಿನ್ ಲೇಟ್ ಪುಟ್ಟೇಗೌಡ ಎಂದು ಬರೆಯಲಾಗಿದೆ ಎಂದರೆ ಸರಿ. ನನಗೆ ಕುಶಕುಮಾರ್ ಗೊತ್ತು.

ಕುಶಕುಮಾರ್ ರವರ ಸ್ವಂತ ಅಕ್ಕ ಈ ಪ್ರಕರಣದ ಫಿರ್ಯಾದುದಾರರು ಎಂದರೆ ಗೊತ್ತಿಲ್ಲ. ನಾನು ಫಿರ್ಯಾದುದಾರರು ಮತ್ತು ಅವರ ಸಹೋದರರಿಂದ ಹಣ ಸಾಲ ಪಡೆದುಕೊಂಡು ಅದನ್ನು ಹಿಂದಿರುಗಿಸಬೇಕಾಗುತ್ತದೆ ಎಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಒಂದೊಂದು ಕಡೆ ಒಂದೊಂದು ವಿಳಾಸವನ್ನು ತೋರಿಸಿ ನ್ಯಾಯಾಲಯಕ್ಕೆ ದಿಕ್ಕು ತಪ್ಪಿಸುತ್ತಿದ್ದೇನೆ ಎಂದರೆ ಸರಿಯಲ್ಲ. ಕುಶಕುಮಾರ್.ಪಿ ರವರನ್ನು ಈ ಪ್ರಕರಣದಲ್ಲಿ ಸಾಕ್ಷಿಯಾಗಿ ವಿಚಾರಣೆ ಮಾಡಿದರೆ ನಿಮಗೆ ತೊಂದರೆ ಇದೆಯೇ ಎಂದರೆ ಇಲ್ಲ. ಈ ಪ್ರಕರಣದಲ್ಲಿ ನಾನು ಜಾಮೀನು ಬಂಧ ಪತ್ರದಲ್ಲಿ ನನ್ನ ಮೈಸೂರಿನ ವಿಳಾಸವನ್ನೇ ನೀಡಿದ್ದೇನೆ. ಸಾಕ್ಷಿಗೆ ಈ ಪ್ರಕರಣದಲ್ಲಿ ಸಾಕ್ಷಿ ನ್ಯಾಯಾಲಯಕ್ಕೆ ಬರೆದುಕೊಟ್ಟ ಜಾಮೀನು ಬಂಧ ಪತ್ರವನ್ನು ತೋರಿಸಲಾಗಿ ಅದರಲ್ಲಿ ತನ್ನ ವಿಳಾಸ ಹಿಂಡಗೂಡ್ಲು ಗ್ರಾಮ, ಹನಗೋಡು ಹೋಬಳಿ ಹುಣಸೂರು ತಾಲ್ಲೂಕು ಎಂದು ಬರೆದಿದೆ ಎಂದರೆ ಸರಿ. ಕುಶಕುಮಾರ್ ರವರಿಂದ ವ್ಯವಸಾಯಕ್ಕಾಗಿ ಸಾಲ ಪಡೆದುಕೊಂಡಿದ್ದೆ. ಫಿರ್ಯಾದುದಾರರಿಂದ ಯಾವ ಕಾರಣಕ್ಕಾಗಿ ಸಾಲ ಪಡೆದುಕೊಂಡಿದ್ದಿರಿ ಎಂದರೆ ಅವರು ಯಾರು ಎಂದು ನನಗೆ ಗೊತ್ತಿಲ್ಲ. ನನ್ನ ವಿರುದ್ಧ ಈ ಎರಡು ಪ್ರಕರಣಗಳಲ್ಲದೇ ಇನ್ನು ಚೆಕ್ಕಿನ ಪ್ರಕರಣಗಳು ನಡೆಯುತ್ತಿದೆ ಎಂದರೆ ಸರಿಯಲ್ಲ. ನಾನು ಹಲವಾರು ಜನರಿಂದ ಸಾಲ ಪಡೆದುಕೊಂಡು ಹಿಂಡಗೂಡ್ಲು ವಿಳಾಸವನ್ನು ಬಿಟ್ಟು ಮೈಸೂರಿಗೆ ಹೋಗಿದ್ದೇನೆ ಎಂದರೆ ಸರಿಯಲ್ಲ. ನಾನು ಫಿರ್ಯಾದುದಾರರಿಂದ ಹಣ ಪಡೆದು ವಾಪಸ್ಸು ಕೊಡದೇ ಮೋಸ ಮಾಡಿದ್ದೇನೆ ಎಂದರೆ ಸರಿಯಲ್ಲ. ಫಿರ್ಯಾದುದಾರರರಿಗೆ ಮೋಸ ಮಾಡಿ ಅವರಿಗೆ ಹಣ ವಾಪಸ್ಸು ಕೊಡಬೇಕಾಗುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹುಣಸೂರಿನ ಎರಡು ನ್ಯಾಯಾಲಯಗಳಲ್ಲಿ ನನ್ನ ವಿರುದ್ಧ ಎರಡು ಚೆಕ್ಕಿನ ಪ್ರಕರಣಗಳು ನಡೆಯುತ್ತಿವೆ ಎಂದರೆ ಸರಿ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.